# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 160/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ವಿಕಾಸ್ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ಶ್ರೀ ರಾಜ್ ಕುಮಾರ್ | | **09.01.2023** |
| **ವಯಸ್ಸು** | ಃ **24 ವರ್ಷ** | | |
| **ವೃತ್ತಿ** | ಃ ಗಾರ್ಮೆಂಟ್ಸ್ ಕೆಲಸ | **ಪ್ರಾ.ಸಾ.** | ಃ **03** |
| **ವಾಸಸ್ಥಳ** | ಃ ಬೆಂಗಳೂರು | **ಚಾ.ಸಾ.** | ಃ **05** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*13.01.2022* ರಂದು ನಾನು ನನ್ನ ಚಿಕ್ಕಪ್ಪನ ಮನೆಯಲ್ಲಿದ್ದಾಗ ಮೃತ ಪ್ರಜ್ವಲ್ ನ ತಾಯಿ ನನಗೆ ಪೋನ್ ಮಾಡಿ ಪ್ರಜ್ವಲ್ ನು ಕಟ್ಟಡದ ಮೇಲಿನಿಂದ ಬಿದ್ದಿದ್ದ ಬಗ್ಗೆ ಹೇಳಿ ನನಗೆ ಬರುವಂತೆ ಹೇಳಿದ್ದರು. ಆ ಕಾಲಕ್ಕೆ ನಾನು ಅದ್ವೈತ ರೆಸಿಡೆನ್ಸಿ ಹೋಟೆಲ್ ನ ಬಳಿ ಹೋಗಿದ್ದೆ. ನಾನು ಹೋಗುವಷ್ಟರಲ್ಲಿ ಪ್ರಜ್ವಲ್ ನ್ನು ಆಸ್ಪತ್ರೆಗೆ ಸೇರಿಸಿದ್ದರು ಮತ್ತು ಆಸ್ಪತ್ರೆಯಲ್ಲಿ ಮರಣಹೊಂದಿದ್ದರು. ಆ ಕಾಲಕ್ಕೆ ಪ್ರಜ್ವಲ್ ನ ತಾಯಿ ಪೋಲೀಸರಿಗೆ ಮತ್ತು ನಮಗೆ ಪ್ರಜ್ವಲ್ ನು ಕಟ್ಟಡದ ಮೇಲಿನಿಂದ ಬಿದಿದ್ದ ಸ್ಥಳವನ್ನು ತೋರಿಸಿದ್ದರು. ಆ ಸ್ಥಳ ಅದ್ವೈತ ರೆಸಿಡೆನ್ಸಿ ಯ ಪಕ್ಕದಲ್ಲಿ ರಾಜ್ ಕಮಲ್ ಟಾಕೀಸ್ ಕಡೆಗೆ ಹೊಗುವ ರಸ್ತೆಯಲ್ಲಿ ಇತ್ತು. ಆ ಸ್ಥಳದಲ್ಲಿ ರಕ್ತ ಹತ್ತಿತ್ತು. ಆ ಕಾಲಕ್ಕೆ ಆ ಸ್ಥಳವನ್ನು ನೋಡಿಕೊಂಡು ಬರವಣಿಗೆ ಮಾಡಿಕೊಂಡಿದ್ದರು. ಆ ಬರವಣಿಗೆ ಮಾಡಿದ್ದ ಕಾಲಕ್ಕೆ ರಸ್ತೆಗೆ ಹತ್ತಿದ್ದ ರಕ್ತ ಒಣಗಿತ್ತು. ಆ ರಸ್ತೆಯಲ್ಲಿ ಜಾಸ್ತಿ ಜನ ಓಡಾಡುತ್ತಾರೆ. ಅದೇ ಕಾಲಕ್ಕೆ ಪ್ರಜ್ವಲ್ ನ ತಾಯಿ ಅದ್ವೈತ ರೆಸಿಡೆನ್ಸಿ ಕಟ್ಟಡ ಮುಂಭಾಗದ ಜಾಗವನ್ನು ತೋರಿಸಿ ಅದೇ ಸ್ಥಳದಲ್ಲಿ ಪ್ರಜ್ವಲ್ ಗೆ ಕೊಲೆ ಬೆದರಿಕೆ ಹಾಕಿದ್ದರು ಎಂದು ಹೇಳಿದ್ದರು. ಆ ದಿನ ರಾತ್ರಿ *9.30* ರಿಂದ *10.30* ರ ವೇಳೆಯಲ್ಲಿ ಆ ಸ್ಥಳದಲ್ಲಿ ಬರವಣಿಗೆ ಮಾಡಿದ್ದರು ಮತ್ತು ನನ್ನ ಸಹಿಯನ್ನು ಪಡೆದಿದ್ದರು. ಆ ಕಾಲಕ್ಕೆ ಆ ಸ್ಥಳದಲ್ಲಿ ಲೈಟ್ ಬೆಳಕು ಇತ್ತು.

*2.* ಪ್ರಜ್ವಲ್ ನು ಸೋಮಶೇಖರ್ ಎನ್ನುವವರ ಹೆಂಡತಿಗೆ ಫೋನ್ ಮಾಡಿ ಮೇಸೆಜ್ ಮಾಡಿದ್ದಕ್ಕೆ ಸೋಮಶೇಖರ್ ಮತ್ತು ಮಹದೇವ ಎನ್ನುವವರು ಕೊಲೆ ಬೆದರಿಕೆ ಹಾಕಿದ್ದಕ್ಕೆ ಪ್ರಜ್ವಲ್ ನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಗೊತ್ತಾಗಿತ್ತು. ಈಗ ನಾನು ನೋಡುತ್ತಿರುವ ನೋಟೀಸ್ ಮತ್ತು ನಿ.ಪಿ–*5* ಮಹಜರ್ ಆ ಸ್ಥಳದಲ್ಲಿ ಬರೆದು ನನ್ನ ಸಹಿ ಪಡೆದಿದ್ದ ದಾಖಲೆಗಳಿವೆ. ಸದರಿ ನೋಟೀಸ್ ಅನ್ನು ನಿ.ಪಿ–*9* ಮತ್ತು ಸಹಿಯನ್ನು ನಿ.ಪಿ–*9*(ಎ) ಮತ್ತು ನಿಪಿ–*5* ರಲ್ಲಿನ ಸಹಿಯನ್ನು ನಿ.ಪಿ–*5*(ಬಿ) ಎಂದು ಗುರುತಿಸಿದೆ.

***1* ನೇ ಆರೋಪಿತನ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಪಾಟೀ ಸವಾಲು : 2 ನೇ ಆರೋಪಿ ಪರ ವಕೀಲರಾದ ಶ್ರೀ ಡಿ.ಕೆ ರವರಿಂದಃ-**

*3.* ಪ್ರಜ್ವಲ್ ನನ್ನ ಸ್ನೇಹಿತನಾಗಬೇಕು. ಮಮತ ಅವರು ಹೇಳಿದ್ದರಿಂದಲೇ ನನಗೆ ಆ ಘಟನೆ ಬಗ್ಗೆ ಗೊತ್ತಾಗಿತ್ತು ಎಂದರೆ ನಿಜ. ನಾನು ಅಲ್ಲಿಗೆ ಹೊಗುವದಕ್ಕಿಂತ ಮುಂಚೆ ಅಲ್ಲಿ ಏನು ನಡೆದಿತ್ತು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ. ಮಮತ ಇವರೇ ಆ ಘಟನೆ ಹೇಗೆ ನಡೆದಿತ್ತು ಎಂದು ಹೇಳಿ ಆ ಸ್ಥಳವನ್ನು ತೋರಿಸಿದ್ದರು ಎಂದರೆ ನಿಜ. ನೋಟೀಸ್ ಮತ್ತು ಮಹಜರ್ ಗೆ ಆ ಘಟನೆ ಸ್ಥಳದಲ್ಲಿಯೇ ನಾನು ಸಹಿ ಮಾಡಿದ್ದೇನೆ. ಪ್ರಜ್ವಲ್ ನನ್ನ ಸ್ನೇಹಿತನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*